# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ

ಸೆಷನ್ಸ್ ಕೇಸ್ ನಂ.54/2022
ಪಿ.ಡಬ್ಲ್ಯೂ.04
ಸಿ.ಡಬ್ಲ್ಯೂ.06

ಸಾಕ್ಷಿದಾರರ ಹೆಸರು: ಹಾರುನರಶೀದ ಜಾವಡಗಿ

ತಂದೆಯ ಹೆಸರು : ಹುಸೇನಸಾಬ

ವಯಸ್ಸು : 38 ವರ್ಷ.

ಉದ್ಯೋಗ : ಮೆಕ್ಯಾನಿಕ್

ವಾಸಸ್ಥಳ : ವಿಜಯಪುರ.

**ಇಂದು ದಿನಾಂಕ 24-04-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದ**

1) ಸಾಕ್ಷಿಗೆ ದಿನಾಂಕ: 21-12-2020 ರ ಗುನ್ಹಾ ಜಾಗೆ ಪಂಚನಾಮೆ ಮೇಲೆ ಇರುವ ಸಹಿಯನ್ನು ತೋರಿಸಲಾಗಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿ.ಪಿ.-18 ಸಾಕ್ಷಿಯ ಸಹಿಯನ್ನು ನಿ.ಪಿ.-18(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಗೆ ನಿ.ಪಿ.-16 ಮತ್ತು 17 ಫೋಟೋವನ್ನು ತೋರಿಸಲಾಗಿ ತನ್ನ ಇರುವಿಕೆಯನ್ನು ಒಪ್ಪಿರುತ್ತಾರೆ. ನಿ.ಪಿ.-18 (ಎ) ಸಹಿಯನ್ನು ನಾನು ಎ.ಪಿ.ಎಮ್.ಸಿ. ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ. ನಿ.ಪಿ.-18 ಮಹಜರನಲ್ಲಿ ಏನೂ ಬರೆದಿದ್ದಾರೆ ಅಂತಾ ನನಗೆ ತಿಳಿದಿದೆ. ನನ್ನನ್ನು ಪೋಲಿಸರು ಗೋಲಗುಮ್ಮಜ ಹಿಂದಿನ ಕೋಟೆ ಗೋಡೆ ಹತ್ತಿರ ಕರೆಯಿಸಿದ್ದರು. ಅಲ್ಲಿ ಒಂದು ಕೊಲೆ ಆಗಿದೆ ಅಂತಾ ತಿಳಿಸಿದ್ದರು.

ಜಾಗೆಯನ್ನು ಚಾಸಾ-1 ತೋರಿಸಿದ್ದರು. ನನ್ನ ಜೊತೆ ಚಾಸಾ-7 ಆಸಿಫ ಸಹ ಇದ್ದರು. ಪೋಲಿಸರು ಸ್ಥಳದಲ್ಲಿ 7-8 ಕಲ್ಲುಗಳನ್ನು ಮತ್ತು ರಕ್ತ ಹತ್ತಿದ ಮಣ್ಣು ರಕ್ತ ಹತ್ತಲಾರದ ಮಣ್ಣು  ಮತ್ತು  ಒಂದು ಚಪ್ಪಲಿಯನ್ನು ತೆಗೆದುಕೊಂಡು ಚೀಲಿನಲ್ಲಿ ಹಾಕಿಕೊಂಡು ಹೋಗಿರುತ್ತಾರೆ.  ಸ್ಥಳದಲ್ಲಿ ಫೋಟೋವನ್ನು ಸಹ ತೆಗೆದಿರುತ್ತಾರೆ. ಪೋಲಿಸರು ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ಅದನ್ನು ನಮಗೆ ಓದಿ ತಿಳಿಸಿದ ಮೇಲೆ ನಾವು ಅಲ್ಲಿಯೇ ಸಹಿ ಮಾಡಿರುತ್ತೇನೆ. ಆಸಿಫ ಸಹ ಸ್ಥಳದಲ್ಲಿ ಸಹಿ ಮಾಡಿರುತ್ತಾನೆ. ಆಗ ಸಮಯ 10-30 ರಿಂದ 11-30 ಆಗಿರಬಹುದು.  ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ  ಎಮ್.ಓ.-1 ರಿಂದ 8 ಇವುಗಳನ್ನು ತೋರಿಸಲಾಗಿ  ಗುರುತಿಸಿರುತ್ತಾರೆ.

2)  ಸಾಕ್ಷಿಗೆ ದಿನಾಂಕ: 21-12-2020 ರ ಶವದ ಮೈಮೇಲೆ ಇದ್ದ ಬಟ್ಟೆ ಜಪ್ತಿ ಪಂಚನಾಮೆ ಮೇಲೆ ಇರುವ ಸಹಿಯನ್ನು ತೋರಿಸಲಾಗಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿ.ಪಿ.-19 ಸಾಕ್ಷಿಯ ಸಹಿಯನ್ನು ನಿ.ಪಿ.-19(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಒಪ್ಪಿದ್ದರಿಂದ ಸದರಿ ಫೋಟೋವನ್ನು ನಿ.ಪಿ.-20 ಅಂತಾ ಗುರುತಿಸಲಾಯಿತು.  ನಿ.ಪಿ.-19(ಎ) ಸಹಿಯನ್ನು ನಾನು ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ.  ಠಾಣೆಯಲ್ಲಿ ಪೋಲಿಸರು  ಅರಿವೆಯನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ.  ಸದರಿ ಅರಿವೆ ಈ ಪ್ರಕರಣದಲ್ಲಿ ಮೃತ ವ್ಯಕ್ತಿಯದ್ದು ಅಂತಾ ಹೇಳಿದ್ದರು.  ಪೋಲಿಸರು ಕಂಪ್ಯುಟರನಲ್ಲಿ ಟೈಪ್ ಮಾಡಿ ನಿ.ಪಿ.-19 ಕ್ಕೆ ನನ್ನ ಸಹಿ ಪಡೆದಿರುತ್ತಾರೆ. ಆಗ ಸಮಯ 6-30 ರಿಂದ 7-0 ಗಂಟೆ ಆಗಿರಬಹುದು. ನನ್ನ ಜೊತೆ ನಿ.ಪಿ.-19 ಕ್ಕೆ ಚಾಸಾ-7 ಆಸಿಫ್ ಸಹ ಸಹಿ ಮಾಡಿರುತ್ತಾರೆ.  ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಒಂದು

ಐಸಕ್ರಿಮ ಬಣ್ಣದ ದ್ದ ತೋಳಿನ  ಶರ್ಟ್ ರಕ್ತ ಹತ್ತಿದ್ದು ಇದನ್ನು ತೋರಿಸಲಾಗಿ ಗುರುತಿಸಿದ್ದರಿಂದ ಅದನ್ನು ಎಮ್.ಓ.-9, ಒಂದು ಬೂದು ಬಣ್ಣದ ಹಾಫ್ ಬನಿಯಾನ್ ರಕ್ತ ಹತ್ತಿದ್ದು ಇದನ್ನು ತೋರಿಸಲಾಗಿ ಗುರುತಿಸಿದ್ದರಿಂದ ಅದನ್ನು ಎಮ್.ಓ.-10, ಒಂದು ಅಡಿದಾಸ್ ಕಂಪನಿಯ ಕಪ್ಪು ಬಣ್ಣದ ನೈಟ್ ಪ್ಯಾಂಟ್ ಇದನ್ನು ತೋರಿಸಲಾಗಿ ಗುರುತಿಸಿದ್ದರಿಂದ ಅದನ್ನು ಎಮ್.ಓ.-11, ಒಂದು ಕ್ಲಿಕ್ಸ ಕಂಪನಿಯ ಬ್ರೌನ ಬಣ್ಣದ ಅಂಡರವೇರ್ ಇದನ್ನು ತೋರಿಸಲಾಗಿ ಗುರುತಿಸಿದ್ದರಿಂದ ಅದನ್ನು ಎಮ್.ಓ.-12 ಅಂತಾ ಗುರುತಿಸಲಾಯಿತು.

<u>ಪಾಟೀ ಸವಾಲುಃ ಶ್ರೀ.ಜಿ.ಎ.ಎ.ವಕೀಲರಿಂದ ಆರೋಪಿತರ ಪರವಾಗಿ</u>

1) ನನ್ನ ಮನೆ ಛಪ್ಪರಬಂದ ಗಲ್ಲಿ,ನೂರಾನಿ ಮಸೀದಿ ಹತ್ತಿರ ಇದೆ ಅಂದರೆ ಸರಿ. ಮೃತ ಕೂಡಾ ನಮ್ಮ ಗಲ್ಲಿಯವನು. ನಮ್ಮ ಮನೆ ಮತ್ತು ಮೃತನ ಮನೆ ಒಂದೇ ಓಣಿಯಲ್ಲಿ ಇದೆ ಅಂದರೆ ಸರಿ.

2) ನನ್ನ ಪ್ರಕಾರ ಕೊಲೆ ಆಗಿದ್ದು 20-12-2020. ನಾನು ಮೆಕ್ಯಾನಿಕ್ ಕೆಲಸ ಮಾಡುತ್ತೇನೆ. ನಾನು ಬೇರೆಯವರ ಗ್ಯಾರೇಜನಲ್ಲಿ ಕೆಲಸ ಮಾಡುತ್ತೇನೆ. ನನಗೆ ಸುದ್ದಿ ದಿ: 20-12-2020 ರಂದು ಸಂಜೆ 5-00 ಗಂಟೆಗ ಮುಟ್ಟಿರುತ್ತದೆ. ಹೆಣ ಬಿದ್ದ ಜಾಗೆಗೆ ಪೋಲಿಸರು ನನ್ನನ್ನು ಕರೆದುಕೊಂಡು ಹೋಗಿದ್ದರು. ಹೆಣ ತೆಗೆಯುವಕ್ಕಿಂತ ಮುಂಚೆ ಪೋಲಿಸರು ಯಾವುದೇ ಪಂಚನಾಮೆ ಮಾಡಿಲ್ಲ. ಸ್ಥಳದಿಂದ ಹೆಣವನ್ನು ಪೋಲಿಸರು ಸಂಜೆ 6-30 ಗಂಟೆಗೆ ಸರಕಾರಿ ದವಾಖಾನೆಗೆ ತೆಗೆದುಕೊಂಡು ಹೋಗಿರುತ್ತಾರೆ. ಪೋಸ್ಟ್ ಮಾರ್ಟಮ್ ಆಗಿ ಹೆಣವನ್ನು ಕೊಡುವತನಕ ನಾನು ಮತ್ತು ಚಾಸಾ-1 ದವಾಖಾನೆಯಲ್ಲಿಯೇ ಇದ್ದೆವು ಅಂದರೆ ಸರಿ. ಅದೇ ರೀತಿ ಚಾಸಾ-7 ಸಹ ಹೆಣವನ್ನು ಕೊಡುವತನಕ

ದವಾಖಾನೆಯಲ್ಲಿ ಇದ್ದ ಅಂದರೆ ಸರಿ. ಹೆಣವನ್ನು ಮಧ್ಯಾನ 12-30 ಕ್ಕೆ ಕೊಟ್ಟಿರುತ್ತಾರೆ. ಶವಸಂಸ್ಕಾರವನ್ನು ಸಂಜೆ 5-30 ಸಮಯಕ್ಕೆ ಮಾಡಿರುತ್ತಾರೆ. ಹೆಣ ಸಂಸ್ಕಾರ ಆಗುವವರೆಗೂ ಕೂಡಾ ಅದರ ಜೊತೆಯಲ್ಲಿ ಇದ್ದೆ ಅಂದರೆ ಸರಿ. 7-8 ಕಲ್ಲುವು ಇದ್ದವು ಎಷ್ಟು ಕೆ.ಜಿ. ಬರುತ್ತವೆ ಅಂತಾ ನನಗೆ ಹೇಳಲು ಆಗುವುದಿಲ್ಲ. ಕಲ್ಲುಗಳನ್ನು ಮತ್ತು ಚಪ್ಪಲಿಯನ್ನು ಪೋಲಿಸರು ಠಾಣೆಯಲ್ಲಿ ತೋರಿಸಿ ವಶಪಡಿಸಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಸ್ಥಳದಲ್ಲಿ ತೋರಿಸಿರುತ್ತಾರೆ. ನಿ.ಪಿ.-16 ಮತ್ತು 17 ರಲ್ಲಿ ಕಾಣುವ ಸ್ಥಳವು ಸುಮಾರು ಕಲ್ಲು ಬಿದ್ದ ಜಾಗೆ ಅಂದರೆ ಸರಿ. ಫೋಟೋದಲ್ಲಿ ಕಲ್ಲುಗಳನ್ನು ಸೀಜ್ ಮಾಡುವ ದೃಶ್ಯ ಕಂಡು ಬರುತ್ತಿಲ್ಲ ಅಂದರೆ ಸರಿ. ಸ್ಥಳದಲ್ಲಿ ಪಂಚನಾಮೆ ಮಾಡಿದ್ದಾರೆ ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 4-5 ದಿನಗಳ ನಂತರ ನನ್ನನ್ನು ಕರೆದುಕೊಂಡು ಹೋಗಿ ಸ್ಥಳದಲ್ಲಿ ನಿಲ್ಲಿಸಿ ಫೋಟೋ ತೆಗೆದಿದ್ದಾರೆ ಅನ್ನುವುದು ಸರಿಯಲ್ಲ. ನಾನು ಸ್ಥಳದಲ್ಲಿ ಚಪ್ಪಲಿ, ರಕ್ತ ಹತ್ತಿದ ಮಣ್ಣು ಮತ್ತು ಸಾದಾ ಮಣ್ಣು ಇವುಗಳನ್ನು ಪೋಲಿಸರು ವಶಕ್ಕೆ ಪೆಡದುಕೊಂಡಿದ್ದಾರೆ ಅಂತಾ ಸುಳ್ಳು ಸಾಕ್ಷಿ ನುಡಿದ್ದೇನೆ ಅನ್ನುವುದು ಸರಿಯಲ್ಲ. ಪೋಲಿಸರು ನಿ.ಪಿ.-19 ರಲ್ಲಿ ಬಟ್ಟೆಗಳನ್ನು ಜಪ್ತಿ ಪಡಿಸಿಕೊಂಡರು ಅಂತಾ ಸುಳ್ಳು ಸಾಕ್ಷಿ ನುಡಿದ್ದೇನೆ ಅಂದರೆ ಸರಿಯಲ್ಲ. ಬಟ್ಟೆಗಳ ಮೇಲೆ ಎಲ್ಲೆಲ್ಲಿ ರಕ್ತ ಹತ್ತಿತ್ತು ಅಂತಾ ನನಗೆ ಹೇಳಲು ಆಗುವುದಿಲ್ಲ. ನನ್ನ ಸಮಕ್ಷಮಮ ನಿ.ಪಿ.-18 ಮತ್ತು 19 ಮಹಜರ ಮಾಡಿಲ್ಲ ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅನ್ನುವುದು ಸರಿಯಲ್ಲ. ಪಂಚರಾಗಿ ಸಹಕರಿಸಲು ಯಾವುದೇ ನೋಟಿಸು ನೀಡಿಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ. )

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಜಯಪೂರ.

**24/04/2024**